## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 265
2. ಸದಸ್ಯರ ಹೆಸರು : ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 16.07.2019
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ; ಇದನ್ನು ಮುಗಿಸಲು ಕಾಲಮಿತಿ ಇದೆಯೇ; ಇದ್ದಲ್ಲಿ, ಯಾವಾಗ ಕಾಮಗಾರಿ ಮುಗಿಯಲಿದೆ; (ಮಾಹಿತಿ ಒದಗಿಸುವುದು). | ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಯೋಜನೆಯ ಪ್ರಸ್ತುತ ಹಂತದಲ್ಲಿ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ. ಈ ಯೋಜನೆಯನ್ನು 2022-23ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ |
| ಆ) | ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಆರಂಭಗೊಂಡ ವರ್ಷ ಯಾವುದು; ಅಲ್ಲಿಂದ ಇಲ್ಲಿವರೆಗೆ ಎಷ್ಟು ಅನುದಾನವನ್ನು ಸದರಿ ಕಾಮಗಾರಿಗೆ ಬಿಡುಗಡೆ ಮಾಡಲಾಗಿದೆ; ಇದರಲ್ಲಿ ಖರ್ಚು ಮಾಡಿರುವ ಹಣವೆಷ್ಟು; (ಮಾಹಿತಿ ಒದಗಿಸುವುದು). | ಭದ್ರಾ ಮೇಲ್ದಂಡೆ ಯೋಜನೆಯ ನಿರ್ಮಾಣದ ಕಾಮಗಾರಿಗಳನ್ನು 2008-09ನೇ ಸಾಲಿನಲ್ಲಿ ಕೈಗೆತ್ತಿಕೊಂಡಿದೆ. ಈ ಯೋಜನೆಗೆ ಬಿಡುಗಡೆಯಾದ ಅನುದಾನ ಮತ್ತು ಖರ್ಚಿನ ವರ್ಷವಾರು ವಿವರ ಈ ಕೆಳಕಂಡಂತಿದೆ:- (ರೂ. ಕೋಟಿಗಳಲ್ಲಿ) (see table below) |
| ಇ) | ಸದರಿ ಕಾಮಗಾರಿ ಆರಂಭಗೊಂಡ ದಿನದಿಂದ ಇಲ್ಲಿವರೆಗೆ ಗುತ್ತಿಗೆ ಪಡೆದಿರುವ ಕಂಪನಿಗಳು, ಗುತ್ತಿಗೆದಾರರ ವಿವರ ನೀಡುವುದು? | ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. |

(ರೂ. ಕೋಟಿಗಳಲ್ಲಿ)

| ಕ್ರಸಂ | ವರ್ಷ | ಅನುದಾನ | ವೆಚ್ಚ | ಸಂಚಿತ ವೆಚ್ಚ |
|---|---|---|---|---|
| 1 | 2007-08 | 50.00 | 3.17 | 3.17 |
| 2 | 2008-09 | 104.00 | 54.30 | 57.47 |
| 3 | 2009-10 | 100.00 | 118.55 | 176.02 |
| 4 | 2010-11 | 121.83 | 125.20 | 301.22 |
| 5 | 2011-12 | 122.00 | 116.54 | 417.76 |
| 6 | 2012-13 | 132.00 | 164.21 | 581.96 |
| 7 | 2013-14 | 180.00 | 279.71 | 861.67 |
| 8 | 2014-15 | 175.00 | 340.40 | 1202.08 |
| 9 | 2015-16 | 260.00 | 201.57 | 1403.63 |
| 10 | 2016-17 | 650.00 | 397.58 | 1801.25 |
| 11 | 2017-18 | 676.00 | 549.56 | 2350.81 |
| 12 | 2018-19 | 720.00 | 657.39 | 3008.20 |
| 13 | 2019-20 | 721.00 | 61.58 | **3069.78 (up to June-2019)** |

**ಸಂಖ್ಯೆ: ಜಸಂಇ 07 ಡಬ್ಲ್ಯೂಎಲ್ಎ 2019**

**(ಡಿ.ಕೆ. ಶಿವಕುಮಾರ್)**
**ಜಲಸಂಪನ್ಮೂಲ ಇಲಾಖೆ**

## ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ 265ಗೆ ಅನುಬಂಧ-1

### ಭದ್ರಾ ಮೇಲ್ದಂಡೆ ಯೋಜನೆ

ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಒಟ್ಟು 29.90 ಟಿ.ಎಂ.ಸಿ. ನೀರಿನ ಬಳಕೆಯೊಂದಿಗೆ ಬರಪೀಡಿತ ಜಿಲ್ಲೆಗಳಾದ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಗಳ 5,57,022 ಎಕರೆ (2,25,515 ಹೆಕ್ಟೇರ್) ಭೂಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಸಲುವಾಗಿ ಮತ್ತು ಇದೇ ಜಿಲ್ಲೆಗಳ 367 ಸಣ್ಣ ನೀರಾವರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟನ್ನು ತುಂಬಿಸುವ ಸಲುವಾಗಿ 2012-13ನೇ ಸಾಲಿನ ದರಪಟ್ಟಿಗಳನ್ವಯ ತಯಾರಿಸಿದ ರೂ.12,340.00 ಕೋಟಿಗಳ ಪರಿಷ್ಕೃತ ಯೋಜನಾ ವರದಿಗೆ ದಿನಾಂಕ: 6/3/2015 ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

**ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತದ ವಿವರಗಳು:**

1. ಯೋಜನೆಯ ಮೊದಲನೇ ಹಂತದಲ್ಲಿ ಎರಡು ಲಿಫ್ಟ್ ಕಾಮಗಾರಿಗಳನ್ನು ಹಾಗೂ ಒಂದು ಸುರಂಗ ನಿರ್ಮಾಣದ ಕಾಮಗಾರಿಗಳನ್ನು 2008-09 ನೇ ಸಾಲಿನಲ್ಲಿ 3 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದರೂ, ಹಲವಾರು ಅಡಚಣೆಗಳಿಂದಾಗಿ ಕಾಮಗಾರಿಗಳಲ್ಲಿ ನಿರೀಕ್ಷಿತ ಪ್ರಗತಿ ಸಾಧ್ಯವಾಗಿರಲಿಲ್ಲ. ಪ್ರಸ್ತುತ ಅಡಚಣೆಗಳನ್ನು ನಿವಾರಿಸಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.
   a) ಪ್ಯಾಕೇಜ್-1ರ ಕಾಮಗಾರಿಗಳು ಪ್ರತಿಶತ 90 ರಷ್ಟು ಅರಣ್ಯ ಪ್ರದೇಶ ಹೊಂದಿದ್ದು, ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಅಗತ್ಯ ತೀರುವಳಿಗಳನ್ನು ಪಡೆಯಲಾಗಿದ್ದು, ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಮಿಟಿಗೇಷನ್ ಕ್ರಮಗಳಿಗೆ ಅನುಮೋದನೆ ಪಡೆದು ಕಾಮಗಾರಿಗಳನ್ನು ಪ್ರಗತಿಯಲ್ಲಿರಿಸಲಾಗಿದೆ.
   b) ಪ್ಯಾಕೇಜ್-2ರ ಕಾಮಗಾರಿಗಳು ಪ್ರತಿಶತ 20 ರಷ್ಟು ಅರಣ್ಯ ಪ್ರದೇಶ ಹೊಂದಿದ್ದು, ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಅಗತ್ಯ ತೀರುವಳಿಗಳನ್ನು ಪಡೆಯಲಾಗಿದ್ದು, ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿವೆ.
   c) ಪ್ಯಾಕೇಜ್-3ರ ಕಾಮಗಾರಿಯು 7.039 ಕಿ.ಮೀ. ಉದ್ದದ ಸುರಂಗ ಹಾಗೂ ಆಗಮನ ಮತ್ತು ನಿರ್ಗಮನ ಕಾಲುವೆಗಳ ನಿರ್ಮಾಣವನ್ನೊಳಗೊಂಡಿದ್ದು, ಸುರಂಗ ಅಗೆತದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಸುರಂಗದ ಲೈನಿಂಗ್ ಕಾಮಗಾರಿಗಳನ್ನೊಳಗೊಂಡಂತೆ ಕಾಮಗಾರಿಗಳನ್ನು ಮೇ-2019ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
2. ಅಜ್ಜಂಪುರ ಸುರಂಗ ನಿರ್ಮಾಣದ ಪ್ರಾರಂಭದ ಪೂರ್ವದಲ್ಲಿ ವಿರೋಧಿಸಿದ ಸ್ಥಳೀಯರ ಬೇಡಿಕೆಯಂತೆ ತರೀಕೆರೆ ಏತ ಕಾಮಗಾರಿಯಡಿಯಲ್ಲಿ 79 ಕೆರೆಗಳನ್ನು ತುಂಬಿಸಲು ಮತ್ತು 20150 ಹೆ. ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯಲ್ಲಿ ನೀರೊದಗಿಸಲು ಅಜ್ಜಂಪುರ ಸುರಂಗದ ಆಗಮನ ಮತ್ತು ನಿರ್ಗಮನ ಭಾಗದಲ್ಲಿ ತರೀಕೆರೆ ಏತ ನೀರಾವರಿ ಕಾಮಗಾರಿಯನ್ನು 2 ಪ್ಯಾಕೇಜುಗಳಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.
3. ಎರಡನೇ ಹಂತದಲ್ಲಿನ ಚಿತ್ರದುರ್ಗ ಶಾಖಾ ಕಾಲುವೆಯ ಕಿ.ಮೀ 1 ರಿಂದ ಕಿ.ಮೀ 134.597 ರವರೆಗಿನ ಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ತುಮಕೂರು ಶಾಖಾ ಕಾಲುವೆಯು ಒಟ್ಟು 160.00 ಕಿ.ಮೀ. ಉದ್ದವಿದ್ದು ಇದರ ಆರಂಭಿಕ 108 ಕಿ.ಮೀ. ವರೆಗಿನ ಕಾಮಗಾರಿಗಳನ್ನು ನಿರ್ಮಾಣಕ್ಕಾಗಿ ಕೈಗೆತ್ತಿಕೊಂಡಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಲುವೆಯ ಇನ್ನುಳಿದ ಭಾಗಗಳಿಗೆ ಅಂದಾಜುಗಳನ್ನು ತಯಾರಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದೆ.
4. ಚಿತ್ರದುರ್ಗ ಶಾಖಾ ಕಾಲುವೆಯಡಿ ಬರುವ ಫೀಡರ್ ಕಾಲುವೆಗಳ ಪ್ರಗತಿಯ ಹಂತದ ವಿವರಗಳು ಈ ಕೆಳಗಿನಂತಿವೆ:
   a) ಹೊಳಲ್ಕೆರೆ ಫೀಡರ್ ಕಾಲುವೆಯ ಆರಂಭಿಕ 4.53 ಕಿ.ಮೀ. ಕಾಮಗಾರಿಯನ್ನು ನಿರ್ಮಾಣಕ್ಕಾಗಿ ಗುತ್ತಿಗೆ ವಹಿಸಲಾಗಿದ್ದು, ನಂತರದ ಫೀಡರ್ ಕಾಲುವೆ ಕಾಮಗಾರಿಗಾಗಿ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುತ್ತಿದೆ.

b) ಇನ್ನುಳಿದಂತೆ ಜಗಳೂರು ಶಾಖಾ ಕಾಲುವೆ, ಚಳ್ಳಕೆರೆ–ಮೊಳಕಾಲ್ಮೂರು ಮತ್ತು ಪಾವಗಡ ಫೀಡರ್ ಕಾಲುವೆಗಳಿಗಾಗಿ ಸರ್ವೆ ಮತ್ತು ತನಿಖಾ ಕಾರ್ಯಗಳನ್ನು ಕೈಗೊಂಡು ಅಂದಾಜುಗಳನ್ನು ತಯಾರಿಸಲು ಕ್ರಮ ಜರುಗಿಸಲಾಗುತ್ತಿದೆ.

5. ಚಿತ್ರದುರ್ಗ ಶಾಖಾ ಕಾಲುವೆಯ ಕಿ.ಮೀ. 0.00 ರಿಂದ 60.00 ರ ವರೆಗಿನ 36000 ಹೆ. ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಪ್ರಾಥಮಿಕ ಹಂತದ ಸರ್ವೆ ಮತ್ತು ತನಿಖಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.
6. ಮೊದಲನೇ ಹಂತದ ಎರಡನೇ ಪ್ಯಾಕೇಜ್ ಮತ್ತು ಟನಲ್ ಕಾಮಗಾರಿಯ ಉಳಿಕೆ ಕೆಲಸಗಳನ್ನು ಪೂರ್ಣಗೊಳಿಸಿ ಮುಂಗಾರು 2019 ರಲ್ಲಿ ಪ್ರಾಯೋಗಿಕವಾಗಿ ವಾಣಿವಿಲಾಸ ಸಾಗರಕ್ಕೆ ವೇದಾ ವ್ಯಾಲಿ ಮೂಲಕ ನೀರು ಹರಿಸಲು ಯೋಜಿಸಲಾಗಿದೆ.

**ಆರ್ಥಿಕ ಪ್ರಗತಿಯ ವಿವರಗಳು:**

✓ ಭದ್ರಾ ಮೇಲ್ದಂಡೆ ಯೋಜನೆಯಡಿಯ ಕಾಮಗಾರಿಗಳಿಗೆ ಒಟ್ಟಾರೆ **ಜೂನ್–2019**ರ ಅಂತ್ಯಕ್ಕೆ **ರೂ. 3069.78ಕೋಟಿ**ಗಳ ಸಂಚಿತ ವೆಚ್ಚ ಮಾಡಲಾಗಿದೆ.

******

## ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ 265ಗೆ ಅನುಬಂಧ-2

### ಭದ್ರಾ ಮೇಲ್ದಂಡೆಯೋಜನೆ

1. **ಪ್ರಮುಖ ಲಿಫ್ಟ್ ಕಾಮಗಾರಿಗಳು ಮತ್ತು ಅಜ್ಜಂಪುರ ಸುರಂಗ**

**ಪ್ಯಾಕೇಜ-1:**ತುಂಗಾ ನದಿಯಿಂದ 17.40 ಟಿ.ಎಂ.ಸಿ ನೀರನ್ನು ಎತ್ತಿ ಭದ್ರಾ ಜಲಾಶಯಕ್ಕೆ ಹರಿಸುವುದು.

**ಪ್ಯಾಕೇಜ್-2:**ಭದ್ರಾ ಜಲಾಶಯದಿಂದ 29.90 ಟಿ.ಎಂ.ಸಿ ನೀರನ್ನು ಎತ್ತಿ ಅಜ್ಜಂಪುರ ಸುರಂಗದವರೆಗೆ ಹರಿಸುವುದು.

**ಪ್ಯಾಕೇಜ್-3:** ಅಜ್ಜಂಪುರದ ಹತ್ತಿರ 6.90 ಕಿ.ಮೀ ಸುರಂಗ ನಿರ್ಮಾಣ.

ಸದರಿ ಮೂರು ಪ್ರಮುಖ ಕಾಮಗಾರಿಗಳನ್ನು ಇ.ಪಿ.ಸಿ ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ. | ಕಾಮಗಾರಿಯ ಹೆಸರು | ಕಾಮಗಾರಿಯನ್ನು ವಹಿಸಿದ ದಿನಾಂಕ | ಗುತ್ತಿಗೆ ವಹಿಸಲಾದ ಸಂಸ್ಥೆಯ ಹೆಸರು | ಟೆಂಡರ್ ಮೊತ್ತ ಕೋಟಿ ರೂ.ಗಳಲ್ಲಿ |
|---|---|---|---|---|
| 1. | ಪ್ಯಾಕೇಜ್-I | 15.10.2008 | ಮೆ::ಸೀವ್ ಜ್ಯೋತಿ, ಹೈದರಾಬಾದ್ | 324.00 |
| 2. | ಪ್ಯಾಕೇಜ್- II | 15.10.2008 | ಮೆ::ಆರ್.ಎನ್.ಎಸ್.ಐ.ಎಲ್, ಹುಬ್ಬಳ್ಳಿ | 1032.00 |
| 3. | ಪ್ಯಾಕೇಜ್-III | 20.10.2008 | ಮೆ::ಶಂಕರ ನಾರಾಯಣ ಕನ್ಸಟ್ರಕ್ಷನ್ಸ್ ಲಿಮಿಟೆಡ್, ಬೆಂಗಳೂರು | 223.96 |

2. **ಚಿತ್ರದುರ್ಗ ಶಾಖಾ ಕಾಲುವೆ:**

ಚಿತ್ರದುರ್ಗ ಶಾಖಾ ಕಾಲುವೆಯು ಅಜ್ಜಂಪುರ ಸುರಂಗದ ಎಕ್ಸಿಟ್‌ನಲ್ಲಿ ಪ್ರಾರಂಭವಾಗುತ್ತಿದ್ದು (ಗ್ರಾಮ: ಹೆಬ್ಬೂರು) 135 ಕಿ.ಮೀ ಉದ್ದವಿರುತ್ತದೆ. ಇದರಡಿ 107265 ಕ್ಷೇತ್ರ ಹನಿ ನೀರಾವರಿ ಹಾಗೂ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ 37 ಕೆರೆಗಳಿಗೆ ನೀರು ತುಂಬಿಸಲು ಯೋಜಿಸಲಾಗಿದೆ ಸದರಿ ಕಾಲುವೆಯನ್ನು 12 ಪ್ಯಾಕೇಜ್‌ಗಳಲ್ಲಿ ಗುತ್ತಿಗೆ ವಹಿಸಲಾಗಿದೆ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ.

ಒಟ್ಟು ಉದ್ದ (ಕಿ.ಮೀ) : 134.58
ಸಾಮರ್ಥ್ಯ (ಕ್ಯೂಮೆಕ್ಸ್) : 55.125
ನೀರಾವರಿ ಕ್ಷೇತ್ರ (ಹೆಕ್ಟೇರ್) : 1,07,265
ಅಚ್ಚುಕಟ್ಟಿನಲ್ಲಿ ತುಂಬಿಸುವ ಕೆರೆಗಳು : 37

| ಕ್ರ ಸಂ | ಕಾಮಗಾರಿಯ ಹೆಸರು | ಕಾಮಗಾರಿಯನ್ನು ವಹಿಸಿದ ದಿನಾಂಕ | ಗುತ್ತಿಗೆ ವಹಿಸಲಾದ ಸಂಸ್ಥೆಯ ಹೆಸರು | ಟೆಂಡರ್ ಮೊತ್ತ ಕೋಟಿ ರೂ.ಗಳಲ್ಲಿ |
|---|---|---|---|---|
| 1 | 2 | 3 | 4 | 5 |
| 1 | CBC-ಪ್ಯಾಕೇಜ್-IV {Y-Junction, ಚೈ.0.00 ಯಿಂದ 16.00 ಕಿ.ಮೀ (ಕಿ.ಮೀ.8 & 9 ಹೊರತುಪಡಿಸಿ)} | 30.01.2019 | ಸದ್ಭವ್ ಕನಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್. | 160.91 |
| 2. | CBC-ಪ್ಯಾಕೇಜ್-I (ಚೈ7.00 ಯಿಂದ 9.00 ಕಿ.ಮೀ & 16.00 ಯಿಂದ 19.00 ಕಿ.ಮೀ) | 06.12.2014 | ಶ್ರೀ. ಉದಯ ಶಿವಕುಮಾರ್ | 36.08 |
| 3. | CBC -ಪ್ಯಾಕೇಜ್-II (ಚೈ.20.00 ಯಿಂದ 30.00 ಕಿ.ಮೀ) | 08.05.2015 | ರೆಡ್ಡಿ ವೀರಣ್ಣ ಕನ್ಸಸ್ಟ್ರಕ್ಷನ್ | 98.25 |
| 4 | CBC -ಪ್ಯಾಕೇಜ್-III (ಜಾನಕಲ್ ಸುರಂಗ) (ಚೈ.58.00 ಯಿಂದ 61.23 ಕಿ.ಮೀ) | 14.10.2016 | ಮೆ॥ ಶಂಕರ ನಾರಾಯಣಕನ್ಸಸ್ಟ್ರಕ್ಷನ್ ಲಿಮಿಟೆಡ್ ಬೆಂಗಳೂರು | 72.08 |
| 5. | CBC -ಪ್ಯಾಕೇಜ್-V (ಚೈ30.00 ಯಿಂದ 40.00 ಕಿ.ಮೀ) | 22.01.2018 | ಮೆ॥ ಆರ್.ಎನ್.ಎಸ್. ಐ.ಎಲ್, ಹುಬ್ಬಳ್ಳಿ | 157.64 |

| | | | | |
|---|---|---|---|---|
| 6. | CBC–ಪ್ಯಾಕೇಜ್–VI (ಚೈ.40.00 ಯಿಂದ 50.00 ಕಿ.ಮೀ) | 30.11.2017 | ಮೆ॥ ಓಷಿಯನ್‌ಕನ್ಸಸ್ಟ್ರಕ್ಷನ್ ಪ್ರೈ.ಲಿ. | 208.25 |
| 7 | CBC–ಪ್ಯಾಕೇಜ್–VII (ಚೈ.50.00 ಯಿಂದ 58.00 ಕಿ.ಮೀ) | 22.12.2017 | ಮೆ॥ ಆದಿತ್ಯಕನ್ಸಸ್ಟ್ರಕ್ಷನ್ ಕಂ. | 102.14 |
| 8 | CBC–ಪ್ಯಾಕೇಜ್–VIII (ಚೈ.61.23 ಯಿಂದ 73.375 ಕಿ.ಮೀ) | 19.03.2018 | ಶ್ರೀ ಎಚ್.ಆರ್.ಕೆ. ಗೌಡ | 62.43 |
| 9. | CBC–ಪ್ಯಾಕೇಜ್–IX (ಚೈ.73.375 ಯಿಂದ 90.00 ಕಿ.ಮೀ) | 21.02.2018 | ಮೆ॥ ಶಂಕರ ನಾರಾಯಣಕನ್ಸಸ್ಟ್ರಕ್ಷನ್ ಲಿ., ಬೆಂಗಳೂರು | 425.61 |
| 10 | CBC–ಪ್ಯಾಕೇಜ್–X (ಚೈ.90.00 ಯಿಂದ 104.00 ಕಿ.ಮೀ) | 04.07.2018 | ಮೆ॥ ಉಷಾ ಕಿರಣ್‌ಕನ್ಸಟ್ರಕ್ಷನ್ಸ್ | 79.66 |
| 11. | CBC–ಪ್ಯಾಕೇಜ್–XI (ಚೈ.104.00 ಯಿಂದ 117.00 ಕಿ.ಮೀ) | 02.03.2019 | ಮೆ॥ ಆರ್.ಎನ್.ಎಸ್‌ಇನ್‌ಫ್ರಾಸ್ಟ್ರಕ್ಚರ್ ಲಿ | 115.39 |
| 12 | CBC–ಪ್ಯಾಕೇಜ್–XII ಚೈ 117.00 ಯಿಂದ 134.597 ಕಿ.ಮೀ) | 01.03.2019 | ಶ್ರೀ ದೊಡ್ಡ ಹನುಮಂತಪ್ಪ | 81.30 |

## 3. ಹೊಳಲ್ಕೆರೆ ಫೀಡರ್ ಕಾಲುವೆ:

ಆಫ್‌ಟೇಕ್ ಚೈನೇಜ್ : ಚಿತ್ರದುರ್ಗ ಶಾಖಾ ಕಾಲುವೆಯ ಚೈ: 28.42 ಕಿ.ಮೀ
ಒಟ್ಟು ಉದ್ದ : 4.53 ಕಿ.ಮೀ
ತುಂಬಿಸುವ ಕೆರೆಗಳ ಸಂಖ್ಯೆ : 22

| ಕ್ರ ಸಂ. | ಕಾಮಗಾರಿಯ ಹೆಸರು | ಕಾಮಗಾರಿಯನ್ನು ವಹಿಸಿದ ದಿನಾಂಕ | ಗುತ್ತಿಗೆ ವಹಿಸಲಾದ ಸಂಸ್ಥೆಯ ಹೆಸರು | ಟೆಂಡರ್ ಮೊತ್ತ ಕೋಟಿ ರೂ.ಗಳಲ್ಲಿ |
|---|---|---|---|---|
| 1 | **HLK Feeder canalಪ್ಯಾಕೇಜ್-I (ಚೈ.0.00 ಯಿಂದ 4.53 ಕಿ.ಮೀ)** | 01.02.2018 | ಜೆ.ಆರ್.ಗೌರೀಶ್ | 7.46 |
| 2 | **HLK Feeder canal–ಪ್ಯಾಕೇಜ್–2(Beyond 4.53Km) (22 ಕೆರೆಗಳನ್ನು ತುಂಬಿಸುವುದು)** | 21.05.2019 | ಶ್ರೀ ದೊಡ್ಡ ಹನುಮಂತಪ್ಪ | 95.01 |

## 4. ತುಮಕೂರು ಶಾಖಾ ಕಾಲುವೆ:

ತುಮಕೂರು ಶಾಖಾ ಕಾಲುವೆಯ ಅಜ್ಜಂಪುರ ಸುರಂಗದ ಎಕ್ಸಿಟ್‌ನಲ್ಲಿ ಪ್ರಾರಂಭವಾಗಿ 159.68 ಕಿ.ಮೀ ಉದ್ದವಿರುತ್ತದೆ. ಇದರಡಿ 84900 ಹೆಕ್ಟರ್ ಪ್ರದೇಶಕ್ಕೆ ಹನಿ ನೀರಾವರಿ ಹಾಗೂ 131 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ.

ಒಟ್ಟು ಉದ್ದ (ಕಿ.ಮೀ) : 159.684
ಸಾಮರ್ಥ್ಯ (ಕ್ಯೂಮೆಕ್ಸ್) : 37.477
ನೀರಾವರಿ ಕ್ಷೇತ್ರ (ಹೆಕ್ಟೇರ್) : 84.900
ಅಚ್ಚುಕಟ್ಟಿನಲ್ಲಿ ತುಂಬಿಸುವ ಕೆರೆಗಳು : 131

| ಕ್ರ ಸಂ. | ಕಾಮಗಾರಿಯ ಹೆಸರು | ಕಾಮಗಾರಿಯನ್ನು ವಹಿಸಿದ ದಿನಾಂಕ | ಗುತ್ತಿಗೆ ವಹಿಸಲಾದ ಸಂಸ್ಥೆಯ ಹೆಸರು | ಟೆಂಡರ್ ಮೊತ್ತ ಕೋಟಿ ರೂ.ಗಳಲ್ಲಿ |
|---|---|---|---|---|
| 1 | 2 | 3 | 4 | 5 |
| 1 | **TBC–ಪ್ಯಾಕೇಜ್–I (ಚೈ.0.00 ಯಿಂದ 10.00 ಕಿ.ಮೀ)** | 19.03.2018 | ಮೆ॥ ಅಮೃತ ಕನ್ಸಸ್ಟ್ರಕ್ಷನ್ ಪ್ರೈ.ಲಿ. | 70.20 |
| 2 | **TBC–ಪ್ಯಾಕೇಜ್–2 (ಚೈ.10.00 ಯಿಂದ 30.00 ಕಿ.ಮೀ)** | 9.03.2018 | ಮೆ॥ ಓಷಿಯನ್ ಕನ್ಸಸ್ಟ್ರಕ್ಷನ್ ಪ್ರೈ.ಲಿ. | 108.62 |
| 3 | **TBC–ಪ್ಯಾಕೇಜ್–3 (ಚೈ.30.00 ಯಿಂದ 47.00 ಕಿ.ಮೀ)** | 03.01.2019 | ಮೆ॥ ಆದಿತ್ಯ ಕನ್ಸಸ್ಟ್ರಕ್ಷನ್ | 89.68 |

| | | | | |
|---|---|---|---|---|
| 4 | **TBC–ಪ್ಯಾಕೇಜ್–4** (ಚೈ.47.00 ಯಿಂದ 61.00 ಕಿ.ಮೀ) | 17.05.2019 | ಸ್ಟಾರ್‌ಕನ್ಸಟ್ರಕ್ಷನ್ ಪ್ರೈವೇಟ್ ಲಿಮಿಟೆಡ್. | 112.23 |
| 5 | **TBC–ಪ್ಯಾಕೇಜ್–5** (ಚೈ.61.00 ಯಿಂದ 84.00 ಕಿ.ಮೀ) | 17.05.2019 | ಸ್ಟಾರ್‌ಕನ್ಸಟ್ರಕ್ಷನ್ ಪ್ರೈವೇಟ್ ಲಿಮಿಟೆಡ್. | 202.02 |
| 6 | **TBC–ಪ್ಯಾಕೇಜ್–6** (ಚೈ.84.00 ಯಿಂದ 98.00 ಕಿ.ಮೀ) | 08.03.2019 | ಸರಳ ಕನ್ಸಸ್ಟ್ರಕ್ಷನ್ ಪ್ರೈ.ಲಿ. | 79.67 |
| 7 | **TBC–ಪ್ಯಾಕೇಜ್–7** (ಚೈ.98.00 ಯಿಂದ 108.00 ಕಿ.ಮೀ) | 09.05.2019 | ರೆಡ್ಡಿ ವೀರಣ್ಣ ಕನ್ಸಸ್ಟ್ರಕ್ಷನ್ | 102.24 |

5. ತರೀಕೆರೆ ಲಿಫ್ಟ್‌ಕಾಮಗಾರಿ: (ಅಜ್ಜಂಪುರ ಸುರಂಗದ ಆಗಮನ ಮತ್ತು ನಿರ್ಗಮನದಲ್ಲಿ ಬರುವಎರಡುಏತ ಕಾಮಗಾರಿಗಳು)

ಅಚ್ಚುಕಟ್ಟು ಪ್ರದೇಶ : 20150 ಹೆಕ್ಟರ್ಸ್
ತುಂಬಿಸುವ ಕೆರೆಗಳ ಸಂಖ್ಯೆ: 7

ಸದರಿಕಾಮಗಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಗುತ್ತಿಗೆ ವಹಿಸಿದ್ದು ವಿವರಗಳು ಈ ಕೆಳಗಿನಂತಿವೆ.

| ಕ್ರ ಸ. | ಕಾಮಗಾರಿಯ ಹೆಸರು | ಕಾಮಗಾರಿಯನ್ನು ವಹಿಸಿದ ದಿನಾಂಕ | ಗುತ್ತಿಗೆ ವಹಿಸಲಾದ ಸಂಸ್ಥೆಯ ಹೆಸರು | ಟೆಂಡರ್ ಮೊತ್ತ ಕೋಟಿ ರೂ.ಗಳಲ್ಲಿ |
|---|---|---|---|---|
| 1 | 2 | 3 | 4 | 5 |
| 1 | ತರೀಕೆರೆ ಲಿಫ್ಟ್ ಪ್ಯಾಕೇಜ್–I | **17.03.2018** | ಮೆ॥ ಜೈನ್‌ಇರಿಗೇಶನ್ ಸಿಸ್ಟಮ್ ಲಿ., | 287.667 |
| 2 | ತರೀಕೆರೆ ಲಿಫ್ಟ್ ಪ್ಯಾಕೇಜ್–2 | **15.03.2018** | ಮೆ॥ ಮೆಗಾ ಇಂಜಿನಿಯರಿಂಗ್& ನೆಟಾಫಿಮ್ **(JV)** | 524.365 |